(ಮತಕ್ಕೆ ಹಾಕುವುದು)

ಛೇರ್ಮನ್ :— ಪ್ರಸ್ತಾಪ ಏನೆಂದರೆ, ಭಾರತ ಸಂವಿಧಾನದ 252 (2)ರ ಮೇರೆಗೆ ನಗರ ಭೂಮಿ (ಪರಮಾವಧಿ ಮತ್ತು ವಿನಿಮಯ) ನಿರಸನ ಅಧಿನಿಯಮ, 1999ನ್ನು (1999ರ ಕೇಂದ್ರ ಅಧಿನಿಯಮ 15) ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು) :— ಮಾನ್ಯ ಚೇರ್‌ಮನ್‌ರವರೇ, ಭಾರತ ಸಂವಿಧಾನ 252(2)ರ ಮೇರೆಗೆ ನಗರ ಭೂಮಿ (ಪರಮಾವಧಿ ಮತ್ತು ವಿನಿಮಯ) ನಿರಸನ ಅಧಿನಿಯಮ 1999ನ್ನು (1999ರ ಕೇಂದ್ರ ಅಧಿನಿಯಮ 15) ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್ :— ನಿರ್ಣಯವನ್ನು ಮಂಡಿಸಲಾಗಿದೆ.

ಛೇರ್ಮನ್ :— ನಿನ್ನೆ ಮಾನ್ಯ ಅರಗ ಜ್ಞಾನೇಂದ್ರ ಅವರ ಪ್ರಶ್ನೆಗೆ ಆರೋಗ್ಯ ಮಂತ್ರಿಗಳು ರಿಪ್ಲೈ ಮಾಡುತ್ತೇನೆಂದು ಹೇಳಿದಿರಿ.

ಶ್ರೀ ಅರಗ ಜ್ಞಾನೇಂದ್ರ :— ನಾನು ತೀರ್ಥಹಳ್ಳಿಯಲ್ಲಿನ ಆಸ್ಪತ್ರೆಗೆ ಪ್ರಸೂತಿ ತಜ್ಞರು ಮಹಿಳಾ ವೈದ್ಯರು ಇಲ್ಲವೆಂದು ಹೇಳಿದ್ದೆ.

(6) ಮಂತ್ರಿಗಳ ಹೇಳಿಕೆ

*(ಅ) ತೀರ್ಥಹಳ್ಳಿ ಆಸ್ಪತ್ರೆಗೆ ಪ್ರಸೂತಿ ತಜ್ಞರ ಮಹಿಳಾ ವೈದ್ಯರ ನೇಮಕ.*

+ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :— ಮಾನ್ಯ ಚೇರ್‌ಮನ್‌ರವರೇ, ಕಳೆದ ಅಧಿವೇಶನದಲ್ಲಿ ಸನ್ಮಾನ್ಯ ಸದಸ್ಯರಾದ ಅರಗಜ್ಞಾನೇಂದ್ರ ಅವರು ತೀರ್ಥಹಳ್ಳಿಯ ಜನರಲ್ ಆಸ್ಪತ್ರೆಯಲ್ಲಿ ಇದ್ದಂತಹ ಮಹಿಳಾ ವೈದ್ಯರು ಸರಿಯಾಗಿ ಕೆಲಸ ಮಾಡತ್ತಿಲ್ಲವೆಂದು ಹೇಳಿದ ಕಾರಣ ಅವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದರು. ಅವರ ಒತ್ತಾಯದ ಪ್ರಕಾರ ಅಲ್ಲಿ ವೈದ್ಯರು ಇಲ್ಲ, ಖಾಲಿ ಬಿದ್ದಿದೆ ಎಂದು ಪದೇ ಪದೇ ಹೇಳುತ್ತಿದ್ದರು. ಹಾಗೂ ಸಾರ್ವಜನಿಕರ ತೊಂದರೆಯನ್ನು ಸರ್ಕಾರದ ಗಮನಕ್ಕೆ ಕೂಡ ತಂದಿದ್ದರು. ಸಾರ್ವಜನಿಕರ ಹಿತದೃಷ್ಟಿಯಿಂದ ದಿನಾಂಕ 8-12-1998ರಲ್ಲಿ ಡಾ: ವನಜಾಕ್ಷಿ ಎಂಬ ಮಹಿಳಾ ವೈದ್ಯರನ್ನು ಸರ್ಕಾರ ಅಲ್ಲಿ ಆ ಸ್ಥಳಕ್ಕೆ ನಿಯುಕ್ತಿಗೊಳಿಸಿತು. ಅಲ್ಲಿ ಅವರು ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಂಡ ಮೇಲೆ ಮತ್ತೆ ಅವರು ಕ್ಯಾಜ್ಯುವಾಲಿಟಿ ಲೀವ್ ಹಾಕಿದ್ದಾರೆ. ಆದಾದಮೇಲೆ ದಿನಾಂಕ 28-4-1999ರಲ್ಲಿ ಡಾ: ಬಿ.ಆರ್. ಶಶಿಕಲಾ ಎನ್ನುವವರನ್ನು ಅಲ್ಲಿ ಸ್ಥಳ ನಿಯುಕ್ತಿಗೊಳಿಸಿದ್ದು,